ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE 20/3/2020

# ಲ್ಯಾಪ್‌ಟ್ಯಾಪ್ ಅಕ್ರಮ ಆರೋಪ ಸದ್ದು

## ಲ್ಯಾಪ್‌ಟ್ಯಾಪ್ ಖರೀದಿಯಲ್ಲಿ ಅಕ್ರಮ: ಕೈ-ದಳ ಸದಸ್ಯರ ಟೀಕೆ, ತನಿಖೆಗೆ ಒತ್ತಾಯ


ಉದಯ 20/3/20

ವಿಧಾನಸಭೆ: ಉನ್ನತ ಶಿಕ್ಷಣ ಇಲಾಖೆ ವತಿ ಯಿಂದ ಪದವಿ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುತ್ತಿರುವ ಲ್ಯಾಪ್‌ಟ್ಯಾಪ್ ಖರೀದಿಯಲ್ಲಿ ಅಕ್ರಮ ನಡೆದಿದೆ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದು ಸದನದಲ್ಲಿ ಗಂಭೀರ ಚರ್ಚೆಗೆ ಕಾರಣವಾಯಿತು.

2016-17 ನೇ ಸಾಲಿನಲ್ಲಿ 14,490 ರೂ.ಗೆ ಖರೀದಿ ಮಾಡಿದ್ದ ಲ್ಯಾಪ್‌ಟ್ಯಾಪ್ ಪ್ರಸ್ತುತ 28,320 ರೂ.ಗೆ ಖರೀದಿ ಮಾಡಲಾಗಿದೆ. ಪ್ರತಿ ಲ್ಯಾಪ್‌ಟ್ಯಾಪ್‌ಗೆ 13,380 ರೂ. ಹೆಚ್ಚು ನೀಡಲಾಗಿದೆ 1,09,916 ಲ್ಯಾಪ್‌ಟ್ಯಾಪ್ ಖರೀದಿಯಾಗಿದ್ದು ಸುಮಾರು 145 ಕೋಟಿ ರೂ. ಹೆಚ್ಚುವರಿ ಹಣದ ಅಕ್ರಮ ಇದಾಗಿದೆ ಎಂದು ಪ್ರತಿಪಕ್ಷ ಕಾಂಗ್ರೆಸ್ ಹಾಗೂ ಜೆಡಿಎಸ್ ಮತ್ತು ಬಿಎಸ್‌ಪಿಯ ಮಹೇಶ್ ಆರೋಪಿಸಿ ತನಿಖೆಗೆ ಆಗ್ರಹಿಸಿದರು. ಈ ಸಂದರ್ಭದಲ್ಲಿ ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

ಮಾಜಿ ಸ್ಪೀಕರ್ ರಮೇಶ್‌ಕುಮಾರ್, ವಿದ್ಯಾರ್ಥಿಗಳಿಗೆ ನೀಡುವ ಲ್ಯಾಪ್‌ಟ್ಯಾಪ್‌ನಲ್ಲೂ ಅಕ್ರಮ ಒಳ್ಳೆಯ ಬೆಳವಣಿಗೆಯಲ್ಲ ಎಂದು ಅಸಮಾಧಾನ ಹೊರಹಾಕಿದರು. ಇದಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಹಿಂದಿನ ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ದರ ನಿಗದಿ ಸಂಪುಟದಲ್ಲಿ ಅನುಮೋದನೆ ಯಾಗಿದೆ ಎಂದರು. ಯಾರ ಅವಧಿಯಲ್ಲಿ ನಡೆದಿದ್ದರೂ ತನಿಖೆಯಾಗಲಿ ಎಂದು ಸಿದ್ದರಾ ಮಯ್ಯ, ಬಂಡೆಪ್ಪ ಕಾಶೆಂಪೂರ್, ಪ್ರಿಯಾಂಕ್ ಖರ್ಗೆ, ರಮೇಶ್ ಕುಮಾರ್ ಆಗ್ರಹಿಸಿದರು.

ಹಿಂದಿನ ಸರ್ಕಾರಗಳಲ್ಲಿ ಹಿಂದುಳಿದ, ಅಲ್ಪಸಂಖ್ಯಾತರ, ಎಸ್‌ಸಿ-ಎಸ್‌ಟಿ ಸಮು ದಾಯಕ್ಕೆ ಮೀಸಲಿಟ್ಟ ಹಣ, ಬಿಡುಗಡೆಯಾದ ಹಣ, ಖರ್ಚಾದ ಹಣದ ಬಗ್ಗೆ ತನಿಖೆ ನಡೆಯಲಿ ಎಂದು ಈಶ್ವರಪ್ಪ ಒತ್ತಾಯಿಸಿದರೆ, ಯಾರೆಲ್ಲಾ ಉದ್ಧಾರ ಆಗಿದ್ದಾರೆ, ಯಾವ್ಯಾವ ಬ್ಯಾಂಕ್ ಖಾತೆ ಇತ್ತು, ಹಾಸಿಗೆ-ದಿಂಬಿಗೆ ಎಷ್ಟು ಹಣ ಕೊಟ್ಟಿದ್ದರು ಎಂಬುದು ಗೊತ್ತಿದೆ ಎಂದು ಕಾಂಗ್ರೆಸ್ ಅವಧಿಯಲ್ಲಿನ ಸಮಾಜ ಕಲ್ಯಾಣ ಇಲಾಖೆಯಲ್ಲಿನ ಹಗರಣ ಆರೋಪ ಕುರಿತು ಸಚಿವ ಸಿ.ಟಿ.ರವಿ ಕುಟುಕಿದರು.




ಸದನದಲ್ಲಿ ಸಿದ್ದರಾಮಯ್ಯ ಮಾತನಾಡಿದರು.

ನಮ್ಮ ಅವಧಿಯಲ್ಲಿ ಅಕ್ರಮ ಆಗಿದ್ದರೆ ಅದೂ ತನಿಖೆಯಾಗಲಿ, ನಿಮ್ಮದೇ ಸರ್ಕಾರ ಇದೆ ಮಾಡಿಸಿ ಎಂದು ಇದಕ್ಕೆ ಸಿದ್ದರಾಮಯ್ಯ ಹಾಗೂ ರಮೇಶ್‌ಕುಮಾರ್ ಸವಾಲು ಹಾಕಿದರು.

ಇದೇ ಸಂದರ್ಭ ಎಸ್‌ಸಿಪಿ, ಟಿಎಸ್‌ಪಿ ಮೊತ್ತ ಎಸ್‌ಸಿ-ಎಸ್‌ಟಿ ವರ್ಗದ ಕಲ್ಯಾಣಕ್ಕೆ ಸಂಪೂರ್ಣ ಬಳಕೆಯಾಗದ ಬಗ್ಗೆಯೂ ಚರ್ಚೆ ನಡೆದು ಉದ್ಯೋಗ, ಕೈಗಾರಿಕೆ, ಜಮೀನು ಖರೀದಿಗೂ ಅದು ಉಪಯೋಗವಾಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು. ಪ.ಜಾ./ಪಂಗಡದವರಿಗೆ ಗುತ್ತಿಗೆಯಲ್ಲಿ ಕನಿಷ್ಠ 1 ಕೋಟಿ ರೂ, ಗರಿಷ್ಠ 5 ಕೋಟಿ ರೂ. ವರೆಗೆ ಅವಕಾಶ ಕಲ್ಪಿಸಬೇಕು ಎಂದು ಹಲವು ಸದಸ್ಯರು ಒತ್ತಾಯಿಸಿದರು.ಎರಡೂ ವಿಚಾರಗಳ ಬಗ್ಗೆ ಸರ್ಕಾರದ ವತಿಯಿಂದ ಯಾವುದೇ ತೀರ್ಮಾನ ಹೊರಬೀಳಲಿಲ್ಲ.

### ಮುಂದಿನ ವರ್ಷ ಉಚಿತ ಲ್ಯಾಪ್‌ಟಾಪ್ ಇಲ್ಲ: ಡಿಸಿಎಂ

ವಿಧಾನಸಭೆ: ಆರ್ಥಿಕ ಹೊರೆ ಕಾರಣಕ್ಕೆ ಮುಂದಿನ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ನೀಡುವ ಯೋಜನೆ ಕೈಬಿಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರಾದ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಹಾಲಪ್ಪ ಆಚಾರ್ ಅವರ ಪರ ಮಹಾಂತೇಶ್ ದೊಡ್ಡಗೌಡರ್ ಕೇಳಿದ ಪ್ರಶ್ನೆಗೆ ಉತ್ತರಿಸಿ, 2017-18ನೇ ಸಾಲಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮ ಯ್ಯ ಹಾಗೂ ಎಚ್.ಡಿ.ಕುಮಾರಸ್ವಾಮಿಯವರ ಅಧಿಕಾರಾವಧಿಯಲ್ಲಿ ಯೋಜನೆಯಡಿ ಲ್ಯಾಪ್‌ಟಾಪ್ ವಿತರಿಸುವುದು ನಿಶ್ಚಯವಾಗಿತ್ತು. ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಿದರೆ 3 ವರ್ಷ ಬಳಸಲು ಅನುಕೂಲವಾಗಲಿದೆ. ಆರ್ಥಿಕ ಇಲಾಖೆ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗಷ್ಟೇ ಲ್ಯಾಪ್‌ಟಾಪ್ ನೀಡಲು ಒಪ್ಪಿಗೆ ನೀಡಿದೆ. ಹಾಗಾಗಿ ಎಲ್ಲ ವರ್ಷದ ವಿದ್ಯಾರ್ಥಿಗಳಿಗೆ ನೀಡಲು ಅವಕಾಶವಿಲ್ಲ ಎಂದರು.

ಪ್ರಸಕ್ತ 2019-20ನೇ ಸಾಲಿನಲ್ಲಿ ಪ್ರಥಮ ಪದವಿಯ 1.09 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ನೀಡಲಾಗಿದ್ದು 311 ಕೋಟಿ ರೂ. ವೆಚ್ಚವಾ ಗಿದೆ. ಇದರಿಂದ ಆರ್ಥಿಕ ಹೊರೆಯಾಗುತ್ತಿದೆ. ಆ ಹಿನ್ನೆಲೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಉಚಿತ ಲ್ಯಾಪ್‌ಟಾಪ್ ವಿತರಣೆ ಕೈಬಿಡಲಾಗುವುದು. ರಾಜ್ಯದಲ್ಲಿ 412 ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗಳಿದ್ದು ಹಲವು ಕಾಲೇಜುಗಳಲ್ಲಿ ಮೂಲ ಸೌಕರ್ಯದ ಕೊರತೆಯಿದೆ ಎಂದರು.